ವಿಶ್ವವಾಣಿ
29.03.2024 ಶುಕ್ರವಾರ
vishwavani.news

# ಸಾಮಾಜಿಕ ತಾಣ ಪಯಣ

## ವಸಂತನ ಆಗಮನ

ಗಿಡಮರವೆಲ್ಲ ಚಿಗುರಿ
ವಸಂತನ ಆಗಮನಕೆ ಕಾಯುತಿವೆ।
ಅಡವಿಯಲಿ ಚೈತ್ರದ ಹಬ್ಬ
ಮದುವಣಗಿತ್ತಿಯಂತೆ ಸಂಭ್ರಮಿಸುತಿವೆ।।

ಮಾವು ಬೇವು ಶ್ರೀಗಂಧವಿರಲಿ
ಒಟ್ಟಾಗಿ ಒಂದೆ ಖುಷಿಯಲಿ ಕುಣಿಯುತಿವೆ।
ಯಾವ ರಣಬಿಸಿಲಿಗಂಜದೆ
ರಸಿಕರ ಕೈಬೀಸಿ ತಮ್ಮತ್ತ ಕರೆಯುತಿವೆ।।

ಹೂವು ಗೊಂಚಲಿನ ಎಸಳಲಿ
ಮುತ್ತಿಕ್ಕೊ ದುಂಬಿಗಳ ದಂಡು
ಜಾತ್ರೆಯಂತೆ।
ದೇವನೆ ಕ್ಷಣ ದಂಗುಗೊಂಡು
ಇಳೆಗೆ ಇಳಿದು ಅವರ ಬಳಿ ಬರುವನಂತೆ।।

ಭೃಂಗಗಳ ಸವಿಗಾನ ಹಿತ
ಪರಿಮಳ ಎಲ್ಲೆಡೆ ಹರಡಿವೆ ಮಧುಕರ।
ತಿಂಗಳ ಬರುವ ವರನಾಗಿ
ಅಂಗಳದ ತಂಬೆಲ್ಲ ಮಂಗಳಕರ।।

ದಾರಿ ದಾರಿಗೆ ಇರುವೆ ದಂಡು
ಬೊಡ್ಡೆಯಿಂದ ತುದಿ ತನಕ ಓಡಾಟ।
ಬರುವ ಅತಿಥಿಗಳ ಸ್ವಾಗತ
ಭರಪೂರ ನಡೆಯುತಿದೆ ಸವಿಯೂಟ।।

● ಎಚ್.ಬಿ.ಕಂಬಳಿ

## ಕವಿ ಅಲ್ಲವೇನೋ?

ಏನೇನೋ ಮನಸಿಗೆ ಹೊಳೆಯುತ್ತದೆ
ತಾನಾಗೇ ಸಾಲುಗಳು ಹುಟ್ಟುತ್ತವೆ
ನವ ಭಾವ ಎದೆಯಲ್ಲಿ ಮೇಳೈಸುತ್ತದೆ
ಸವಿ ಭಾವ ಮನದಲಿ ವಿಜೃಂಭಿಸುತ್ತದೆ

ಇಲ್ಲದ ಕಾಮನಬಿಲ್ಲು ಅಲ್ಲಿ ತೋರುತ್ತದೆ
ನಲ್ಮೆಯ ಸರಸ ಸಲ್ಲಾಪ ಕಿವಿಗೆ ಕೇಳುತ್ತದೆ
ಇಲ್ಲ ಅಲ್ಲೇನಿಲ್ಲ ಅನ್ನುವುದು ಗೊತ್ತಿದೆ
ನಿಲ್ಲದ ಆವೇಗ ಎಡೆ ಬಿಡದೇ ಕೆಣಕುತ್ತದೆ

ಭಾವನೆಗಳು ಬಸಿರಾಗಿ ಮೊಟ್ಟೆ ಇಡುತ್ತವೆ
ಕಾವಿಗೆ ಮರಿಯಾಗಿ ಹಾರಲು ಹವಣಿಸುತ್ತವೆ
ತಾವು ಕಂಡರೆ ಸಾಕು ಆಚೆ ಹಾರಿ ಬರುತ್ತವೆ
ಕವನದ ಸಾಲು ಸಾಲುಗಳಾಗಿ ನಿಲ್ಲುತ್ತವೆ

ಕೇಳಿಕೊಳ್ಳುವೆ ನನ್ನಲೇ ಏಕೆ ಹೀಗಾಗುತ್ತಿದೆ
ಕಾರಣ ನಾನು ಕವಿ ಎಂದು ಅನಿಸುತ್ತದೆ
ಬಿಮ್ಮನೇ ಕೈಗೆತ್ತಿಕೊಳುವೆ ಲೇಖನಿಯನು
ಸುಮ್ಮನೇ ಕವನ ಗೀಚುವೆ ಕವಿ ಅಲ್ಲವೇನು

● ಶೋಭಾ ಪುರೋಹಿತ್

## ಹೈಕುಗಳು

ಮಾಯದ ಗಾಯ
ಮಾಡಿದ್ದು ಕತ್ತಿಯಲ್ಲ
ಆಡಿದ ಮಾತು

★

ಉದುರಿ ಬಿತ್ತು
ಅತೃಪ್ತಿಯ ಗಾಳಿಗೆ
ತೃಪ್ತಿಯ ಹಣ್ಣು

★

ಸಂತ ನಡೆವ
ಹಾದಿಯಲ್ಲಿರುತ್ತದೆ
ಸದಾ ವಸಂತ

★

ಸೋಲುಂಡವರ
ಹಾದಿಯಲ್ಲಿ ಸಿಕ್ಕಿತು
ಗೆಲುವ ದಾರಿ

★

ಬೀಜಕ್ಕೆ ತನ್ನ
ಶಕ್ತಿಯ ಅರಿವಾಯ್ತು
ನೆಲಕ್ಕೆ ಬಿದ್ದಾಗ

● ಲಕ್ಷ್ಮಣ್ ಜಮದಾಡೆ

## ಕಾರ್ಟೂನ್

ಚುನಾವಣಾ ಮೂಡ್‌ಗೆ ವಾಲಿದ ಕರ್ನಾಟಕ



ಸಧ್ಯಕ್ಕೆ ಮನೆ ಬಿಟ್ಟು ಎಲ್ಲಿಗೂ ಹೋಗಬೇಡಿ .. ಕುಕ್ಕರ್, ಸೀರೆ ಹಂಚುವವರು ಯಾವ ಕ್ಷಣದಲ್ಲೂ ಬರಬಹುದು ..!!!

● ಎಚ್.ಎಸ್. ವಿಶ್ವನಾಥ್

## ಬೀಜಿ ಮಾತು

ಬಾಳಿನಲ್ಲಿ ಏನಿಲ್ಲ..?
ಕೊಲ್ಲಲು ವಿಷವಿದೆ,
ಬದುಕಿಸಲು ಔಷಧಿಯೂ ಇದೆ,
ಔಷಧದಲ್ಲೂ ವಿಷವಿದೆ, ಇದುವೇ ಜೀವನ

## ತರ್ಲೇತಿಮ್ಮ






ಸೀರೆಯುಟ್ಟ ನಾರಿಯ ವರ್ಣನೆಗೂ ಸಿಲುಕದ ಸೊಗಸು. ಚಿತ್ರದಲ್ಲಿರುವವರು ದಿವ್ಯಾ ಸುರೇಶ್

## ಅಹಿಂಸೆಯೇ ಪರಮ ಧರ್ಮ

● ಸುಮನಾ ರಾವ್, ದುಬೈ

ಅವರೊಬ್ಬ ಬಟ್ಟೆಯ ವ್ಯಾಪಾರಿ. ರಾಜಸ್ಥಾನದ ಬಿಕಾನೇರ್‌ನಲ್ಲಿ ಅವರದ್ದೊಂದು ಪುಟ್ಟ ಬಟ್ಟೆ ಅಂಗಡಿಯಿತ್ತು. ಬೆಳಿಗ್ಗೆ ಅಂಗಡಿ ತೆರೆದು ವ್ಯಾಪಾರ ಮಾಡಿ, ಮಧ್ಯಾಹ್ನ ಊಟಕ್ಕೆ ಮನೆಗೆ ಬರುತ್ತಿದ್ದರು. ಊಟದ ಜೊತೆಗೆ ಚಿಕ್ಕದೊಂದು ವಿಶ್ರಾಂತಿ ಮುಗಿಸಿ ಸಾಯಂಕಾಲಕ್ಕೆ ಅಂಗಡಿಗೆ ವಾಪಸ್ಸಾಗುತ್ತಿದ್ದರು. ಇದು ಅವರ ನಿತ್ಯದ ದಿನಚರಿ.

ಅದೊಂದು ಬೇಸಿಗೆಯ ದಿನ. ಯಥಾಪ್ರಕಾರ ಊಟಕ್ಕೆ ಮನೆಗೆಂದು ಹೊರಟರು. ಕೆಲವೇ ನಿಮಿಷಗಳಲ್ಲಿ ವಾಪಸ್ಸು ಅಂಗಡಿಗೆ ಬಂದರು. ಕೆಲಸಗಾರರಿಗೆ ಆಶ್ಚರ್ಯ ಆಯಿತು. ಇದೇನಿದು ಕೆಲವೇ ಕ್ಷಣಗಳಲ್ಲಿ ಧಣಿಗಳು ಹಿಂತಿರುಗಿದರಲ್ಲ ಎಂದುಕೊಂಡು, 'ಏನಾಯ್ತು ಯಾಕೆ ವಾಪಸ್ಸು ಬಂದಿರಿ?' ಎಂದು ಕೇಳಿದರು. ಅದಕ್ಕೆ, ಆ ವ್ಯಾಪಾರಿ 'ಏನಿಲ್ಲ ಸ್ವಲ್ಪ ಸಮಯದ ನಂತರ ಹೋಗುತ್ತೇನೆ' ಎಂದರು.

ಅರ್ಧಗಂಟೆ ಕಳೆದು, ಪುನಃ ಊಟಕ್ಕೆ ಹೋಗುತ್ತೇನೆ ಎಂದು ಹೊರಟರು. ಹಾಗೆಯೇ ವಾಪಸ್ಸು ಬಂದರು. ಕೆಲಸಗಾರರು ಏನಾಯ್ತು, ಯಾಕೆ ಮತ್ತೆ ಹಾಗೇ ಬಂದಿರಿ ಎಂದು ಕೇಳಲು, ಏನಿಲ್ಲ ಮತ್ತೆ ಹೋಗುವೆ ಎಂದರು. ಇದೇ ರೀತಿ ಇನ್ನೆರಡು ಸಲ, ಪುನರಾವರ್ತನೆಯದಾಗ ಕೆಲಸಗಾರರು, 'ಧಣಿಗಳೇ ಏನಾದರೂ ಸಮಸ್ಯೆಯೇ? ಯಾಕೆ ಮನೆಗೆ ಹೋಗುತ್ತೇನೆಂದು ಅರ್ಧಕ್ಕೆ ವಾಪಸ್ಸು ಬರುತ್ತಿದ್ದೀರಲ್ಲ?' ಎಂದು ಕೇಳಿದಾಗ ಸತ್ಯನಾರಾಯಣರು ಬಲು ಸಂಕೋಚದಿಂದ, 'ಅಲ್ಲ ಹೊರಗೆ ತುಂಬಾ ಬಿಸಿಲು, ಮತ್ತೇ..' ಎನ್ನುತ್ತಿರುವಾಗ, 'ಓಹ್, ಬಿಸಿಲಿಗೆ ಹೆದರಿ ಮನೆಗೆ ಊಟಕ್ಕೆ ಹೋಗುತ್ತಿಲ್ಲವೋ ನೀವು?' ಎಂದು ಕೆಲಸಗಾರರು ಕೇಳಿದರು. ಅದಕ್ಕುತ್ತರವಾಗಿ, 'ಅದು ಹಾಗಲ್ಲ, ಮೇಲೆ ಬಿಸಿಲು ಜೋರಾಗಿದೆ. ಒಂದು ಚಿಕ್ಕ ಬೆಕ್ಕಿನ ಮರಿ ನನ್ನ ಸ್ಕೂಟರ್‌ನ ಕೆಳಗೇ ಮಲಗಿ ಕೊಂಡಿದೆ. ನಾನೇನಾದರೂ ಕಿಕ್ ಹೊಡೆದರೆ, ಆ ಬೆಕ್ಕಿಗೆ ಎಚ್ಚರ ಆಗಿ ಬಿಡುತ್ತದೆ. ಅದಕ್ಕೆ ನಾನಿವತ್ತು ಮನೆಗೆ ಹೋಗುವುದಿಲ್ಲ, ಹೋಟೆಲಿನಿಂದ ಏನಾದರೂ ತಂದು ಬಿಡು, ಇಲ್ಲಿಯೇ ಊಟ ಮಾಡಿಬಿಡುತ್ತೇನೆ' ಎಂದರು.

ಎಂತಹ ಸೂಕ್ಷ್ಮ ಸಂವೇದನೆ ನೋಡಿ. ಒಂದು ಚಿಕ್ಕ ಪ್ರಾಣಿಗೂ ನನ್ನಿಂದ ತೊಂದರೆ ಆಗಬಾರದು, ನನ್ನ ಯಾವ ಕೆಲಸದಿಂದಲೂ ಬೇರೆಯವರಿಗೆ ಅನಾನುಕೂಲ ಆಗಬಾರದು ಎಂಬ ಆಲೋಚನೆಯೇ ಅತ್ಯಂತ ಶ್ರೇಷ್ಠವಾದದ್ದು. ಪರರ ಹಿತಚಿಂತನೆ ಕಾಯುವುದು ಅಹಿಂಸೆಯ ಪರಾಕಾಷ್ಠೆ. ಈ ಭೂಮಿಯ ಮೇಲೆ ಬದುಕುವ ನಮ್ಮ ಸಹಜೀವಿಗಳ ಹಿತ ಕಾಯುವುದು ಮನುಷ್ಯರಾದ ನಮ್ಮ ಆದ್ಯ ಕರ್ತವ್ಯ.



ಮೇಲೆ ಹೇಳಿದ ಬಟ್ಟೆ ವ್ಯಾಪಾರಿ ಬೇರೆ ಯಾರೂ ಅಲ್ಲ, ಬಿಕಾನೇರ್‌ನ ಸತ್ಯನಾರಾಯಣ ರಾಠಿ ಎಂಬ ವ್ಯಕ್ತಿ. ಇವರು ಮೊದಲು ಅಂದರೆ 25 ವರ್ಷಗಳ ಹಿಂದೆ ಬಟ್ಟೆ ಅಂಗಡಿ ವ್ಯಾಪಾರಿಯಾಗಿದ್ದರು. ಈಗ ಬಿಕಾನೇರ್‌ನಲ್ಲಿ ಮುರುಳಿ ಮನೋಹರ್ ಗೋಶಾಲೆ ಕಟ್ಟಿ, ಅದನ್ನೇ ನೋಡಿಕೊಳ್ಳುತ್ತಿದ್ದಾರೆ.

ಇಂದಿನ ದಿನಗಳಲ್ಲಿ, ಜನರು ಸ್ವಹಿತವನ್ನು ಕಾಪಾಡಲು ಏನನ್ನಾದರೂ ಮಾಡಲು ತಯಾರಿರುತ್ತಾರೆ. ತಮ್ಮ ಹಿತ ಕಾಯ್ದುಕೊಳ್ಳಲು ಜನ ಕೊಲೆಯ ಮಟ್ಟಕ್ಕೆ ಹೋಗುವುದನ್ನು ನಾವು ಕೇಳುತ್ತೇವೆ. ಹಿಂಸೆ, ಕೊಲೆ, ಜಗಳ, ಮಾರಾಮಾರಿ ಮುಂತಾದ ವಿಕ್ಷಿಪ್ತ ಸುದ್ದಿಗಳನ್ನೇ ಕೇಳುವಾಗ, ಸತ್ಯನಾರಾಯಣ ರಾಠಿಯವರ ಇಂತಹ ಸನ್ನಡತೆ ಕಿವಿಗೆ ಅಪ್ಯಾಯಮಾನದ ಸುದ್ದಿಯಾಗಿ ಕೇಳುತ್ತದೆ. ಅಲ್ಲವೇ.

ನಾವೂ ಅಂತಹ ಒಂದು ಸೂಕ್ಷ್ಮ ಸಂವೇದಿತನವನ್ನು ಬೆಳೆಸಿಕೊಂಡರೆ, ನಮ್ಮ ಎಲ್ಲ ಕ್ರಿಯೆಗಳು ಯಾವುದೇ ಜೀವಿಗೆ ಹಾನಿಯುಂಟು ಮಾಡುವುದಿಲ್ಲ. ನಮ್ಮ ಮಾತುಗಳು ಯಾರ ಮನಸ್ಸಿಗೂ ನೋವುಂಟು ಮಾಡುವುದಿಲ್ಲ. ನಾವು ನಿಜವಾದ ಅರ್ಥದಲ್ಲಿ ಅಹಿಂಸಾ ಮಾರ್ಗದಲ್ಲಿ ಬಾಳುತ್ತೇವೆ.

## ಮಾರಿಕೊಂಡವರು!



● ಮಂಜೇಶ್ ದೇವಗಳ್ಳಿ, ಮೈಸೂರು

ಬದುಕೇ ಹಾಗೇ, ಕೆಲವೊಂದು ಪ್ರಶ್ನೆಗಳನ್ನು ನಮ್ಮಲ್ಲೇ ಕೇಳಿಕೊಂಡರೆ ಬದುಕಿನಲ್ಲಿ ಅದೆಷ್ಟೋ ಉತ್ತರಗಳು ಸಿಗುತ್ತವೆ. ಆದರೆ ದೊರೆತ ಉತ್ತರಗಳನ್ನ ಒಪ್ಪಿಕೊಳ್ಳುವ ಮನೋಭಾವ ಇರಬೇಕಷ್ಟೆ. ಹೀಗೆಯೇ ನನ್ನಲ್ಲಿ ಮೂಡಿದ ಒಂದು ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವಿದು.

ಸಮಾಜದಲ್ಲಿ ಕೀಳು ಮಟ್ಟದಲ್ಲಿ ಕಾಣಲಾಗುವ ವೇಶ್ಯೆ ವೃತ್ತಿ ನಿರತ ಜೀವಿಗಳು ಅವರ ಹಣಕಾಸಿನ ತೊಂದರೆ ನೀಗಲು ಹಾಗೂ ತಮ್ಮವರನ್ನು ಸಲುಹಲು ಈ ವೃತ್ತಿಗೆ ಇಳಿಯುತ್ತಾರೆ. ಅವರು ತಮ್ಮ ದೇಹವನ್ನು ಮಾರಿಕೊಂಡು ಬಿಡಲು ಬಲವಾದ ಕಾರಣವೇ ಇರುತ್ತದೆ. ಅದರ ಹಿಂದೆ ಅವರ ಕುಟುಂಬ ನಿರ್ವಹಣೆಯ ಹೊಣೆಯಿಂದಲೋ ಅಥವಾ ಮತ್ತಾವುದೊ ಸಂಕಷ್ಟದ ಸೆರೆಯಿಂದ ಬಿಡಿಸಿಕೊಳ್ಳಲೆಂದೋ ಈ ವೃತ್ತಿಗಿಳಿದು ಬಿಟ್ಟಿರುತ್ತಾರೆ. ಸಮಾಜ ಇವರನ್ನು ಕಾಣುವ ದೃಷ್ಟಿ ಒಂದೆಡೆಗೆ ಕೀಳುಮಟ್ಟದು. ಇವರನ್ನು ನಿಕೃಷ್ಟವಾಗಿ, ಕಾಲ ಕಸದಂತೆ ಕಾಣುತ್ತಾರೆ. ಅವರ ಮನದೊಳಗಿನ ನೋವು, ಅಸಹಾಯಕತೆ ಇವು ಯಾವುವೂ ಯಾರ ಕಣ್ಣಿಗೂ ಕಾಣಿಸುವುದಿಲ್ಲ. ಇದು ಒಂದು ತರಹನಾದ ಬದುಕಿನ ಬವಣೆ.

ಮತ್ತೊಂದು ಕಡೆ ಅಲ್ಲೊಬ್ಬ ತಾನು ಹುಟ್ಟುತ್ತಲೇ ಪಡೆದು ಬಂದ ಸಂಬಂಧಗಳನ್ನು ಕೇವಲ ದುಡ್ಡಿಗಾಗಿ ದೂರ ಮಾಡಿಕೊಂಡು. ತನಗೆ ತಾನೇ ಶ್ರೇಷ್ಠ ವ್ಯಕ್ತಿ ಯೆಂಬ ಹಗಲು ಕನಸು ಕಾಣುತ್ತಿದ್ದ. ಆತನಿಗೆ ತನ್ನವರಿಗಿಂತಲೂ ಹಣವೇ ಮೇಲು. ಸಂಬಂಧಗಿಂತ ಸವಲತ್ತಿನಲ್ಲಿ ಸಂಭ್ರಮ ಪಡುವ ವ್ಯಕ್ತಿಯಾತ. ಆದರೆ ಆದರೆ ಆರ್ಥಿಕ ಸಮಸ್ಯೆ ಹೊರತುಪಡಿಸಿ, ಇತರೇ ಕಷ್ಟ ಕಾಲದ ಆ ದುಡ್ಡೇ ಅವನನ್ನು ಬದುಕಿಸಬಲ್ಲದೇ ಎನ್ನುವ ಸತ್ಯ ಮಾತ್ರ ಅವನ ತಲೆ ಹೊಕ್ಕಿರುವುದಿಲ್ಲ. ದುಡ್ಡಿನ ಮದದಲ್ಲಿ ಆತ ಯೋಚನಾ ಶಕ್ತಿಯನ್ನೇ ಕಳೆದುಕೊಂಡಿರುತ್ತಾನೆ. ಕೊನೆಗೊಮ್ಮೆ ಇದು ಎಲ್ಲವೂ ಅರಿವಿಗೆ ಬಂದಾಗ ಕಾಲ ಮಿಂಚಿಹೋಗಿರುತ್ತದೆ. ಮತ್ತದೇ ಹಳೆ ಸಂಬಂಧಗಳನ್ನು ಬೆಸೆಯುವುದು ಕಷ್ಟ ಸಾಧ್ಯ. ಒಡೆದ ಮನವನ್ನು ಒಂದುಗೂಡಿಸಲು ಎಂದೂ ಸಾಧ್ಯವಿಲ್ಲ.

ಹಾಗಾಗಿ ಬದುಕಿನಲ್ಲಿ ಹಣವೇ ಎಲ್ಲವೂ ಅಲ್ಲ.

ತನ್ನವರನ್ನು ಸಲುಹಲು ದೇಹವನ್ನ ಮಾರಿಕೊಂಡವರು ಒಂದೆಡೆಯಾದರೆ, ತನ್ನ ಸಿರಿತನದ ಅಹಂನಲ್ಲಿ ತನ್ನವರನ್ನೇ ಕಳೆದುಕೊಂಡವ ಮತ್ತೊಬ್ಬ. ಬಂಧಗಳನ್ನು ಉಳಿಸಿಕೊಳ್ಳಲು, ಹಸಿವ ತುಂಬಲು ಮಾರಿಕೊಂಡವರು ಒಂದೆಡೆಯಾದರೆ, ವೈಭೋಗದ ಹಣದ ಅಹಂನಲ್ಲಿ ಬಂಧಗಳನ್ನೇ ಮಾರಿಕೊಂಡವರು ಮತ್ತೊಂದೆಡೆ.

ಸಮಾಜದ ದೃಷ್ಟಿಯಲ್ಲಿ ದೇಹ ಮಾರಿಕೊಂಡವರು ಕೀಳಾದರೆ. ಹಣದ ಅಹಂನಲ್ಲಿ ಸಂಬಂಧಗಳನ್ನೇ ಮಾರಿಕೊಂಡವರು ಕೀಳಲ್ಲವೇ?

# ವಿ ಟಾಕೀಸ್

## ಮರಳುಗಾಡಿನಲ್ಲಿ ಬರಡಾದ ಬದುಕು



ದೂರ ಬೆಟ್ಟ ನುಣ್ಣಗೆ ಎಂಬ ಮಾತಿದೆ, ಅದಕ್ಕೆ ಹೊಂದುವ ಕಥೆ ಆಡುಜೀವಿತಂನಲ್ಲಿದೆ. ಆತ ನಜೀಬ್, ಕೇರಳದ ಪುಟ್ಟ ನೆಮ್ಮದಿಯ ಬದುಕು ಕಟ್ಟಿಕೊಂಡಿರುತ್ತಾನೆ. ತಾಯಿ ಮತ್ತು ಮಡದಿಯೇ ಈತನ ಸರ್ವಸ್ವ. ತನ್ನ ಗೆಳೆಯರ ಮಾತಿಗೆ ಮರುಳಾಗಿ ದೂರದ ಅರಬ್ ದೇಶಕ್ಕೆ ತೆರಳಿ ಹೆಚ್ಚಿನ ಹಣ ಸಂಪಾದನೆ ಮಾಡಿಕೊಂಡು ಬರಬೇಕು ಎಂಬ ಆಸೆ ಆತನ ಮನದಲ್ಲಿ ಮೂಡುತ್ತದೆ. ಅರಬ್‌ಗೆ ತೆರಳಲು ಬೇಕಾದ ಹಣ ಹೊಂದಿಸಿಕೊಡುತ್ತಾನೆ. ನಜೀಬ್ ಹೆಚ್ಚಿನ ವ್ಯಾಸಂಗ ಮಾಡಿದವನೂ ಅಲ್ಲ, ಆದರೂ ಚಿಕ್ಕ ಕಂಪನಿಯಲ್ಲಿ ಸಣ್ಣ ನೌಕರಿಯಾದರೂ ಸಿಗಬಹುದು ಎಂಬ ಹಂಬಲದಿಂದ ದುಬೈಗೆ ಬಂದಿಳಿಯುತ್ತಾನೆ.

ದುಬೈಗೆ ಬಂದಿಳಿದ ಮೇಲೆ ವಾಸ್ತವತೆ ಅರಿವಾಗುತ್ತದೆ. ಕೆಲಸ ಕೊಡಿಸುವುದಾಗಿ ಹೇಳಿ ಹಣ ಪಡೆದ ಏಜೆಂಟ್ ಮೋಸ ಮಾಡಿರುತ್ತಾನೆ. ನಜೀಬ್‌ನನ್ನು ದುಬೈನ ಶ್ರೀಮಂತ ವ್ಯಕ್ತಿಯೊಬ್ಬ ಕರೆದೊಯ್ದು ಕುರಿ, ಆಡು, ಒಂಟೆ ಕಾಯುವ ಕೆಲಸಕ್ಕೆ ನಿಯೋಜಿಸುತ್ತಾನೆ. ಅಲ್ಲಿ ನಜೀಬ್ ಜೀವನ ನರಕವಾಗುತ್ತದೆ. ಊಟವಿರಲಿ ಕುಡಿಯಲು ನೀರೂ ಇಲ್ಲದೆ ಪರಿತಪಿಸುವಂತಾಗುತ್ತದೆ. ಕುಡಿಯಲು ನೀರು ಕೇಳುವುದೇ ಕಷ್ಟವಾಗಿರುವಾಗ



ಇನ್ನು ಅಲ್ಲಿಂದ ತಪ್ಪಿಸಿಕೊಂಡು ಬರುವ ಮಾತು ಕನಸಾಗೇ ಉಳಿಯುತ್ತದೆ. ನಜೀಬ್ ಆ ನರಕದ ಕೂಪದಲ್ಲಿ ಸತತ ಮೂರು ವರ್ಷಗಳ ಕಾಲ ಬಳಲಿ ಬೆಂಡಾಗಿರುತ್ತಾನೆ. ಎತ್ತ ನೋಡಿದರೂ ಮರಳುಗಾಡು, ಅಲ್ಲಿಂದ ತಪ್ಪಿಸಿಕೊಳ್ಳಲು ಹೋಗಿ ಶಿಕ್ಷೆಗೂ ಗುರಿಯಾಗುತ್ತಾನೆ. ಒಂದಲ್ಲ ಒಂದು ದಿನ ಇಲ್ಲಿಂದ ತಪ್ಪಿಸಿಕೊಂಡ ತನ್ನೂರಿಗೆ ಸೇರುತ್ತೇನೆ ಎಂಬ ಆಸೆ ಮನದಲ್ಲಿ ಜೀವಂತವಾಗಿರುತ್ತದೆ. ಕೊನೆಗೂ ನಜೀಬ್‌ಆ ಮೃತ್ಯು ಕೂಪದಿಂದ ತಪ್ಪಿಕೊಂಡು ಬರುತ್ತಾನೆ. ಅದು ಹೇಗೆ, ಆ ಮರಳುಗಾಡಿನಲ್ಲಿ ಆತನಿಗೆ ಎದುರಾಗುವ ಸವಾಲುಗಳೇನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಆಡುಜೀವಿತಂ ನೈಜ ಘಟನೆ ಆಧಾರಿತ ಚಿತ್ರ. ಖ್ಯಾತ ಲೇಖಕ ಬೆನ್ಯಾಮಿನ್ ರಚಿಸಿರುವ ಆಡುಜೀವಿತಂ ಕೃತಿ ಆಧರಿಸಿ ಈ ಸಿನಿಮಾ ಸಿದ್ಧವಾಗಿದೆ. ಬ್ಲೆಸ್ಸಿ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇಡೀ ಕಥೆ ಸೌದಿ ಅರೇಬಿಯಾದ ಮರಳು ಗಾಡಿನಲ್ಲಿಯೇ ಸಾಗುತ್ತದೆ. ಎಲ್ಲಿಯೂ ಬೋರ್ ಹೊಡೆಸದಂತೆ, ಪ್ರತಿ ಸನ್ನಿವೇಶವೂ ಪ್ರೇಕ್ಷಕರ ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ನಿರೂಪಿಸಿ ಸೈ ಎನಿಸಿಕೊಂಡಿದ್ದಾರೆ ನಿರ್ದೇಶಕ ಬ್ಲೆಸ್ಸಿ. ಪ್ರತಿ ದೃಶ್ಯವೂ ಕೂಡ ಒಂದಕೊಂದು ಹೊಸೆದುಕೊಂಡ ಅದ್ಭುತವಾಗಿ ಮೂಡಿಬಂದಿದೆ. ನಮ್ಮ ಕಣ್ಣಮುಂದೆಯೇ ನಜೀಬ್ ಕಷ್ಟಕ್ಕೆ ಸಿಲುಕಿದ್ದಾನೇನೂ ಎಂಬ ಭಾವ ನಮ್ಮನ್ನು ಆವರಿಸದೇ ಇರದು.

### ಮನಗೆದ್ದ ಪೃಥ್ವಿರಾಜ್

ನಜೀಬನ ಪಾತ್ರ, ಪ್ರೇಕ್ಷಕರ ಮನದಲ್ಲಿ ಕಾಡುತ್ತಲೇ ಇರುತ್ತದೆ. ಪೃಥ್ವಿರಾಜ್ ಸುಕುಮಾರನ್ ನಜೀಬನ ಪಾತ್ರದಲ್ಲಿ ಅಕ್ಷರಶಃ ಮನಗೆಲ್ಲುತ್ತಾರೆ. ತಮ್ಮ ಪಾತ್ರಕ್ಕಾಗಿ ಮಾಡಿಕೊಂಡಿರುವ ತಯಾರಿ, ಅದಕ್ಕೆ ಪಟ್ಟಿರುವ ಶ್ರಮವನ್ನು ಮೆಚ್ಚಲೇಬೇಕು. ನಜೀಬನ ಪಾತ್ರಕ್ಕೆ ತೂಕ ಇಳಿಸಿಕೊಂಡಿದ್ದು, ತೆರೆಯಲ್ಲಿ ನೋಡಿದರೆ ಇವರೇನ ಪೃಥ್ವಿರಾಜ್ ಎಂದು ನಂಬಲು ಆಗದಷ್ಟು ದೇಹವನ್ನು ದಂಡಿಸಿದ್ದಾರೆ. ನಿಜವಾಗಿಯೂ ಈ ಪಾತ್ರಕ್ಕೆ ಪೃಥ್ವಿರಾಜ್ ಅವರೇ ಸರಿ ಸಾಟಿ ಎನಿಸದೇ ಇರದು. ಇನ್ನು ಅಮಲಾ ಪೌಲ್, ಜಿಮ್ಮಿ ಜೀನ್ ಲೂಯಿಸ್, ಅಕೆಪ್ ನಜೀಮ್, ಗೋಕುಲ್ ಹೀಗೆ ಎಲ್ಲರೂ ತಮ್ಮ ಪಾತ್ರಕ್ಕೆ ಜೀವ ತುಂಬಿ ನಟಿಸಿದ್ದಾರೆ. ಎ.ಆರ್. ರೆಹಮಾನ್ ಸಂಗೀತ ಚಿತ್ರಕ್ಕೆ ಶಕ್ತಿ ತುಂಬಿದೆ. ಸುನೀಲ್ ಹಾಗೂ ಮೋಹನ್ ಛಾಯಾಗ್ರಹಣ ಪ್ಲಸ್ ಪಾಯಿಂಟ್ ಆಗಿದೆ.



### ಶ್ರಮಕ್ಕೆ ಸಂದ ಫಲ

ಆಡುಜೀವಿತಂ ಒಂದಲ್ಲ ಎರಡಲ್ಲ ಬರೋಬ್ಬರಿ ಹದಿನಾರು ವರ್ಷಗಳ ಶ್ರಮದಿಂದ ಸಿದ್ಧವಾದ ಸಿನಿಮಾ. ಈ ಪರಿಶ್ರಮಕ್ಕೆ ತಕ್ಕ ಫಲ ಸಂದಿದೆ. ಸಿನಿಮಾ ನೋಡಿದವರೆಲ್ಲಾ ಮೆಚ್ಚಿಕೊಂಡಾಡಿದ್ದಾರೆ. ಆಡುಜೀವಿತಂ ಪೃಥ್ವಿರಾಜ್ ಜೀವನಾದ ಶ್ರೇಷ್ಠ ಸಿನಿಮಾಗಳಲ್ಲಿ ಒಂದು. ಈ ಸಿನಿಮಾ ನೋಡಿದ ಮೇಲೆ ಅರಬ್‌ಗೆ ತೆರಳುವುದಿರಲಿ ಆ ದೇಶದ ಬಗ್ಗೆ ಯೋಚನೆ ಮಾಡಲು ಮನಸು ಅಂಜುತ್ತದೆ. ನಜೀಬ್ ಇಲ್ಲಿ ಸಾಂಕೇತಕ ಮಾತ್ರ, ಅಂತಹ ಅದೆಷ್ಟು ಜೀವಗಳು ಮರಳುಗಾಡಿನಲ್ಲಿ ಸಂಕಷ್ಟಕ್ಕೆ ಸಿಲುಕಿ ನರಳುತ್ತಿವೆಯೊ ತಿಳಿಯದು.



## ಮಹಾನಟಿ ಕರೆತಂದ ರಮೇಶ್

ಕಿರುತೆರೆಯಲ್ಲಿ ಹಲವು ರಿಯಾಲಿಟಿ ಶೋಗಳು ಪ್ರಸಾರವಾಗುತ್ತಿವೆ. ಆ ಸಾಲಿಗೆ ಈಗ ಮಹಾನಟಿ ಕಾರ್ಯಕ್ರಮವೂ ಸೇರ್ಪಡೆಯಾಗಿದೆ. ಈ ಹೊಸ ರಿಯಾಲಿಟಿ ಶೋ ಮೂಲಕ ಕರುನಾಡಿನ ಯುವ ನಟಿಯರನ್ನ ಹುಡುಕುವ ಕೆಲಸ ಆರಂಭವಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಸಂಚರಿಸಿರುವ ಜೀ ತಂಡ, ನಟನೆಯ ಆಸಕ್ತಿ ಇರುವ ಪ್ರತಿಭೆಗಳನ್ನು ಆರಿಸಿ ತಂದಿದೆ. ನಟಿಯಾಗುವ ಕನಸು ಹೊತ್ತ ಅದೆಷ್ಟೋ ಯುವ ನಟಿಯರಿಗೆ, ಸರಿಯಾದ ವೇದಿಕೆ ಸಿಗದೆ ಅವರ ಕನಸುಗಳು ಕರುಗುವ ಹೊತ್ತಿನಲ್ಲಿ, ಅದನ್ನ ಪೋಷಿಸಿ ಬೆಳೆಸಲು ಮಾಡುತ್ತಿರುವ ಈ ಹೊಸ ಪ್ರಯತ್ನವೇ ಮಹಾನಟಿ. ಹೊಸ ಪ್ರಯೋಗದ ರಿಯಾಲಿಟಿ ಶೋನಲ್ಲಿ ಯಾರು ತೀರ್ಪುಗಾರರಾಗಿ ಪಾಲ್ಗೊಳ್ಳಬಹುದು ಎಂಬ ಕುತೂಹಲವಿತ್ತು. ಅದಕ್ಕೀಗ ಉತ್ತರವೂ ಸಿಕ್ಕಿದೆ. ಖ್ಯಾತ ನಟ ರಮೇಶ್ ಅರವಿಂದ್, ನಟಿ ಪ್ರೇಮಾ, ನಿಶ್ವಿಕಾ ನಾಯ್ಡು ಮತ್ತು ನಿರ್ದೇಶಕ ತರುಣ್ ಸುಧೀರ್ ಈ ಶೋನಲ್ಲಿ ತೀರ್ಪುಗಾರರಾಗಿ ಪಾಲ್ಗೊಳ್ಳಲಿದ್ದಾರೆ .ಈ ನಾಲ್ಕು ಜನರಲ್ಲಿ ಒಬ್ಬರು ಹೊಸದಾಗಿ ಬರುವ ನಟಿಯರಿಗೆ ಅಭಿನಯದ ಮಜಲುಗಳನ್ನ ಕಲಿಸುವ ಮೆಂಟರ್ ಆಗಿ ಕಾರ್ಯನಿರ್ವಹಿಸಲ್ಲಿದ್ದಾರೆ. ಶನಿವಾರದಿಂದ ಮಹಾನಟಿ ಜೀ ಕನ್ನಡದಲ್ಲಿ ಪ್ರಸಾರವಾಗಲಿದೆ.

## ಶೂಟಿಂಗ್ ಮುಗಿಸಿದ ವಿದ್ಯಾರ್ಥಿಗಳು

ರ್‍ಯಾಪರ್ ಚೆಂದನ್‌ಶೆಟ್ಟಿ ನಾಯಕನಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಅರುಣ್ ಅಮುಕ್ತ ನಿರ್ದೇಶನದ, ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಚಿತ್ರದಲ್ಲಿ ಚಂದನ್ ಶೆಟ್ಟಿ ನಾಯಕನಾಗಿ ನಟಿಸಿದ್ದಾರೆ. ಸದ್ಯ ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು, ಚಿತ್ರ ತಂಡ ಕುಂಬಳ ಕಾಯಿ ಒಡೆದಿದೆ. ಪ್ರಶಾಂತ್ ಸಂಬರ್ಗಿ, ಹಿರಿಯ ನಟಿ ಭವ್ಯಾ, ಸುನೀಲ್ ಪುರಾಣಿಕ್, ರಘು ರಾಮನಕೊಪ್ಪ, ಕಾಕ್ರೋಜ್ ಸುಧೀರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಬೆಂಗಳೂರು, ಮೈಸೂರು, ಮಂಗಳೂರು, ಚಿಕ್ಕಮಗಳೂರು ಸುತ್ತಮುತ್ತ ಸುಮಾರು ಐವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ಜೂನ್‌ನಲ್ಲಿ ಚಿತ್ರವನ್ನು ತೆರೆಗೆ ತರಲು ತಯಾರಿಯೂ ನಡೆಯುತ್ತಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಚಿತ್ರದಲ್ಲಿ ಚಂದನ್ ಶೆಟ್ಟಿ ಹಲವು ಶೇಡ್‌ನಲ್ಲಿ ಮಿಂಚಿದ್ದಾರೆ. ಮೂರು ಆಯಾಮದಲ್ಲಿ ಅವರ ಪಾತ್ರ ಸಾಗಲಿದ್ದು, ಆ ಮೂರೂ ಶೇಡ್‌ಗಳು ಒಂದಕ್ಕೊಂದು ತದ್ವಿರುದ್ಧವಾಗಿರುವುದು ವಿಶೇಷ. ಕುಮಾರ್ ಗೌಡ ಛಾಯಾಗ್ರಹಣ, ಭರ್ಜರಿ ಚೇತನ್ ಮತ್ತು ವಾಸುಕಿ ವೈಭವ್ ಸಾಹಿತ್ಯ, ಪವನ್



ಗೌಡ ಸಂಕಲನ, ಟೈಗರ್ ಶಿವು, ನರಸಿಂಹ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ವಿಜೇತ್ ಕೃಷ್ಣ, ವಾಸು ದೀಕ್ಷಿತ್ ಮತ್ತು ಶಶಾಂಕ್ ಶೇಷಗಿರಿ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ.



## ಉತ್ತರಕಾಂಡದಿಂದ ಹೊರಬಂದ ರಮ್ಯಾ

ಸ್ಯಾಂಡಲ್ ವುಡ್ ಕ್ವೀನ್ ರಮ್ಯಾ ಅವರನ್ನು ತೆರೆಯಲ್ಲಿ ಕಣ್ತುಂಬಿಕೊಳ್ಳಬೇಕು ಎಂಬ ಆಸೆ ಸಿನಿಪ್ರಿಯರಲ್ಲಿತ್ತು. ಅಂತೆಯೇ ರಮ್ಯಾ ಚಿತ್ರರಂಗಕ್ಕೆ ಮರಳಿದರು. ಆದರೆ ನಟಿಯಾಗಿಯಲ್ಲ ತಮ್ಮದೇ ಆಪಲ್ ಬಾಕ್ಸ್ ಪ್ರೊಡಕ್ಷನ್ ಹೌಸ್ ಸ್ಥಾಪಿಸಿ ನಿರ್ಮಾಪಕಿಯಾಗಿ ಗುರುತಿಸಿಕೊಂಡರು. ಉತ್ತಮ ಕಥೆಯ ಸಿನಿಮಾವನ್ನು ನಿರ್ಮಿಸಿದರು. ರಮ್ಯಾ ಅವರನ್ನು ಮತ್ತೆ ನಾಯಕಿಯಾಗಿ ತೆರೆಯಲ್ಲಿ ನೋಡಲೇಬೇಕು ಎಂದು ಅಭಿಮಾನಿಗಳು ಒತ್ತಾಯಿಸಿದರು. ಆ ಬಳಿಕ ರಮ್ಯಾ ಉತ್ತರಾಕಾಂಡದಲ್ಲಿ ನಾಯಕಿಯಾಗಿ ನಟಿಸಲು ಗ್ರೀನ್ ಸಿಗ್ನಲ್ ನೀಡಿದರು. ಡಾಲಿ ಧನಂಜಯ ನಾಯಕನಾಗಿ ನಟಿಸುತ್ತಿದ್ದ ಉತ್ತರಾಕಾಂಡ ಅದ್ದೂರಿಯಾಗಿ ಸೆಟ್ಟೇರಿತ್ತು. ಇನ್ನೇನು ಸಿನಿಮಾದ ಚಿತ್ರೀಕರಣ ಆರಂಭವಾಗುತ್ತದೆ, ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ ಎಂದು ಕಾದು ಕುಳಿತಿರುವಾಗಲೇ ರಮ್ಯಾ ಚಿತ್ರತಂಡದಿಂದ ಹೊರನಡೆದಿದ್ದಾರೆ, ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದ್ದಾರೆ. ಡೇಟ್ಸ್ ಹೊಂದಾಣಿಕೆಯ ಕಾರಣದಿಂದ ಚಿತ್ರತಂಡದಿಂದ ಹೊರ ನಡೆದಿದ್ದಾಗಿ ರಮ್ಯಾ ಹೇಳಿದ್ದಾರೆ. ರಮ್ಯಾ ರಾಜಕೀಯ ರಂಗಕ್ಕೆ ರೀ ಎಂಟ್ರಿಯಾಗುತ್ತಾರಾ, ಇಲ್ಲ ಸಿನಿಮಾರಂಗದಲ್ಲಿಯೇ ಮುಂದುವರಿಯುತ್ತಾರಾ ಎಂಬುದನ್ನು ಕಾದು ನೋಡಬೇಕಿದೆ. ಆದರೆ ಪದ್ಮಾವತಿಯನ್ನು ಮತ್ತೆ ತೆರೆಯಲ್ಲಿ ನೋಡಬೇಕು ಎಂಬ ಕನಸು ಹಾಗೆಯೇ ಉಳಿದಿದೆ.